ಅ) ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು ವಿವಿಧ ಬೆಳೆಗಳ ಉತ್ಪಾದನಾ ವೆಚ್ಚದ ಮಾಹಿತಿಯನ್ನು ಎಲ್ಲಾ ರಾಜ್ಯಗಳಿಂದ ಪಡೆದು, ಸೂಕ್ತ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು. ಈ ಆಯೋಗವು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಪರಿಗಣಿಸಿದ ಉತ್ಪನ್ನ ವೆಚ್ಚದ ಮಾಹಿತಿಯು ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು ರಾಜ್ಯ ಸರ್ಕಾರಕ್ಕೆ ಒದಗಿಸಿದ ವರದಿಯಲ್ಲಿ ಇರುವುದಿಲ್ಲ.

ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಹಂತದ ಬಗ್ಗೆ

೩೨೨. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಹಂತದ ಮೂಲ ಅಂದಾಜು ಮತ್ತು ಖರ್ಚು ಮಾಡಿದ ಹಣ ?

ಆ) ಒಪ್ಪಲಾದ ನಿಯಮಾವಳಿಗಳನ್ನು ಸರ್ಕಾರವು ಪಾಲಿಸದೇ ಇರುವುದರಿಂದ ಎರಡನೇ ಹಂತಕ್ಕೆ ನೆರವು ನೀಡಲು ವಿಶ್ವ ಬ್ಯಾಂಕ್ ನಿರಾಕರಿಸಿರುವುದು ನಿಜವೇ ?

ಇ) ಬಹಳಷ್ಟು ಅವ್ಯವಹಾರದ ಕಾರಣಕ್ಕಾಗಿ ತುಂಡು ಗುತ್ತಿಗೆ ಪದ್ಧತಿಯನ್ನು ಸರ್ಕಾರವು ಆರಂಭಗೊಳಿಸಿರುವುದು ನಿಜವೇ ?

ಈ) ತಪ್ಪು ಅಂದಾಜುಗಳಿಂದಾಗಿ ಯೋಜನೆಯು ವೆಚ್ಚದಲ್ಲಿ ಹೆಚ್ಚಳವಾಗಿರುವುದು ನಿಜವಲ್ಲವೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೭೮ ರಲ್ಲಿ ವಿಶ್ವ ಬ್ಯಾಂಕ್ ನೆರವಿಗೆ ಮುಂದೊಡ್ಡಲಾದ ಕರ್ನಾಟಕ ನೀರಾವರಿ ಯೋಜನೆಯಲ್ಲಿ ಆಳವಡಿಸಲಾದಂತೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟದ ಮೊದಲ ಹಂತದ ಅಂದಾಜು ವೆಚ್ಚ ೧೯೯.೯೩ ಕೋಟಿ ರೂಪಾಯಿಗಳು. ೧೯೭೮ ರಿಂದ ೧೯೮೬ರ ವರೆಗಿನ ವಿಶ್ವ ಬ್ಯಾಂಕ್ ನೆರವಿನ ಅವಧಿಯಲ್ಲಿ ಮೊದಲ ಹಂತಕ್ಕೆ ಆದ ಖರ್ಚು ರೂ. ೩೩೪.೭೪ ಕೋಟಿ.

ಆ) ಎರಡನೇ ಹಂತದ ಯೋಜನೆಯು ಕೇಂದ್ರ ಸರ್ಕಾರದಿಂದ ಅಂಗೀಕಾರ ಪಡೆದಿದ್ದು ವಿಶ್ವ ಬ್ಯಾಂಕ್ ನಿಯೋಗದವರು ಈಗಾಗಲೇ ಹಲವಾರು ಬಾರಿ ರಾಜ್ಯಕ್ಕೆ ಭೇಟಿ ಕೊಟ್ಟು ಮಾತುಕತೆಗಳನ್ನು ನಡೆಸಿದ್ದಾರೆ. ಇನ್ನು ೪-೫ ತಿಂಗಳಲ್ಲಿ ವಿಶ್ವಬ್ಯಾಂಕ್‌ನಿಂದ ಯೋಜನೆಯ ಅಪ್ರೈಸಲ್ ನಡೆಯುವ ನಿರೀಕ್ಷೆ ಇದೆ.

ಇ) ಇಲ್ಲ.

ಈ) ಯೋಜನೆಯ ಅವಧಿಯಲ್ಲಿ ಆದ ದರಗಳ ಹೆಚ್ಚಳ, ನಿರ್ಮಾಣ ಕಾಲದಲ್ಲಿ ಆದ ಕೆಲವು ವಿನ್ಯಾಸಗಳಲ್ಲಿ ಬದಲಾವಣೆ, ಇತ್ಯಾದಿ ಕಾರಣಗಳಿಂದಾಗಿ ಯೋಜನಾ ವೆಚ್ಚದಲ್ಲಿ ಹೆಚ್ಚಳವಾಗಿದೆ.

ಗುಲ್ಬರ್ಗಾ ತಾಲ್ಲೂಕು ಹಾಗರಗುಂಡಗಿ ಕೆರೆಯ ಬಗ್ಗೆ

೩೭೨. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ತಾಲ್ಲೂಕು ಹಾಗರಗುಂಡಗಿ ಕೆರೆಯನ್ನು ಕಟ್ಟಲಾಂ ಯಾವಾಗ ಪ್ರಾರಂಭ ಮಾಡಲಾಯಿತು ?

ಆ) ಸದರೀ ಕೆರೆಯ ಕಾಮಗಾರಿ ಕೆಲಸಕ್ಕೆ ಮೊದಲು ಅಂದಾಜು ಮಾಡಿದ ಹಣವೆಷ್ಟು? ಮತ್ತು ಕೆಲಸ ಪೂರ್ಣಗೊಂಡಿದೆಯೇ ?

ಇ) ಹಾಗಿದ್ದಲ್ಲಿ, ಸದರೀ ಕೆರೆಯಿಂದ ಎಷ್ಟು ಕರೆ ಜಮೀನು ನೀರಾವರಿ ಆಗುತ್ತಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೭೨–೭೩.

ಆ) ರೂ. ೧೩,೮೮,೦೦೦ ಕಾಲುವೆ ಕೆಲಸವನ್ನೊಳಿದು ಮಿಕ್ಕೆಲ್ಲ ಕೆಲಸಗಳು ಪೂರ್ಣಗೊಂಡಿದೆ.

ಇ) ಕೆಲಸ ಪೂರ್ಣಗೊಂಡ ನಂತರ ೭೦೬ ಎಕರೆ ನೀರಾವರಿ ಸೌಲಭ್ಯ ಹೊಂದುತ್ತದೆ.

ಅನುದಾನಿತ ಪ್ರಾಥಮಿಕ ಶಾಲೆಗಳ ಮುಖ್ಯೋಪಾಧ್ಯಾಯರ ಹುದ್ದೆಯ ಕುರಿತು

೪೦೯. ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).– ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಾಥಮಿಕ ಶಾಲೆಗಳ ಮುಖ್ಯೋಪಾಧ್ಯಾಯರ ಹುದ್ದೆಯ ಸೌಲಭ್ಯವನ್ನು ಅನುದಾನಿತ ಪ್ರಾಥಮಿಕ ಶಾಲೆಗಳಿಗೂ ವಿಸ್ತರಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಈ ಸೌಲಭ್ಯವನ್ನು ಅವರೂ ಪಡೆಯುವಂತೆ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಹೌದು. ಪ್ರಾಥಮಿಕ ಶಾಲಾ ಅನುದಾನ ಸಂಹಿತೆಯ ನಿಯಮ ೨೬ರ ಪ್ರಕಾರ ಶಿಕ್ಷಕರ ಸಂಖ್ಯೆ ೧೦ಕ್ಕಿಂತ ಅಧಿಕವಾಗಿದ್ದಾಗ ಮುಖ್ಯೋಪಾಧ್ಯಾಯರನ್ನು ನೇಮಿಸಿಕೊಳ್ಳಲು ಅವಕಾಶವಿದೆ.

ಆ) ಪ್ರಶ್ನೆ (೧)ಗೆ ಕೊಟ್ಟಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಬಿಎಡ್ ಕಾಲೇಜುಗಳ ಮಂಜೂರಾತಿ ಬಗ್ಗೆ

೪೫೨. ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ೧೯೮೫–೮೬ ರಿಂದ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು, ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರಗಳು ಮತ್ತು ಬಿಎಡ್ ಕಾಲೇಜುಗಳಿಗೆ ಮಂಜೂರಾತಿ ನೀಡಿರುವ ಸಂಖ್ಯೆ ಎಷ್ಟು ? (ವರ್ಷವಾರು ಮತ್ತು ಜಿಲ್ಲಾವಾರು ಸಂಖ್ಯೆ ಕೊಡುವುದು)

೨) ಸರ್ಕಾರ ಈ ವರ್ಷ ಇನ್ನೂ ಪ್ರೊಫೆಷನಲ್ ಇನ್ಸ್‌ಟಿಟ್ಯೂಟ್‌ನ್ನು ಪ್ರಾರಂಭಿಸಲು ಅನುಮತಿ ನೀಡಲು ಯೋಜಿಸಿದೆಯೇ ?

೩) ಸರ್ಕಾರದ ಪ್ರೊಫೆಷನಲ್ ಇನ್ಸ್‌ಟಿಟ್ಯೂಷನ್ಸ್‌ಗಳ ಮಂಜೂರಾತಿ ನೀಡುವ ಬಗ್ಗೆ ಏನಾದರೂ ನಿರ್ದಿಷ್ಟ ನೀತಿ ಅಳವಡಿಸಿಕೊಳ್ಳಲು ಸರ್ಕಾರ ಯೋಚಿಸಿದೆಯೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

೧) ಉತ್ತರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

೨) ಇಲ್ಲ.

೩) ಹೌದು.